ಈಗ ಹೆಂಡದ ಬದಲು ಹೆಂಡತಿಯ ನೆನಪು ಸ್ಮೃತಿಗೆ ಬಂದು ಅವನ ಪಿತ್ತ ನೆತ್ತಿಗೇರಿಸುತ್ತಿತ್ತು. ಇಂದೂ ಕೂಡ ಹೆಂಡತಿಯ ನೆನಪು ಅವನ ಹಿಡಿಹಿಪ್ಪೆ ಮಾಡತೊಡಗಿತು. ಹೀಗಾದರೆ ತನಗೇನೋ ಆಗುತ್ತದೆ ಎಂಬ ವಿಚಿತ್ರ ಭಯ ಮೂಡಿತು ಅವನೊಳಗೆ. ಅದನ್ನು ಮರೆಯಲು ಹೊರಗಡೆ ಹೋಗಿ ನಾಲ್ಕು ಹೆಜ್ಜೆ ನಡೆದು ಗೇಟು ನೋಡಿಕೊಂಡು ಬಂದು ಮಲಗಿದ.

ಈಗೀಗ ಕೊನೇರಿಗೆ ತಾನು ಬದುಕಿದ್ದು ನಿರರ್ಥಕ, ನೆಮ್ಮದಿಯಿಲ್ಲದ ಜೀವನ ತನ್ನದು ಎನಿಸತೊಡಗಿತ್ತು. ಎಲ್ಲವನ್ನೂ ಬಿಟ್ಟು ತಾನು ಎಲ್ಲಿಗಾದರೂ ಓಡಿಹೋಗಲೇ.. ಹಾಗೆ ಮಾಡಿದರೆ ಯಾರಾದಾರೂ ಏನೆಂದುಕೊಂಡಾರು.. ಅಂದುಕೊಂಡರೇನಂತೆ ನೆಮ್ಮದಿಯೊಂದು ಸಿಕ್ಕರೆ ಅದಕ್ಕಿಂತ ಹೆಚ್ಚಿನದೇನಿದೆ ಜೀವನದಲ್ಲಿ ಎಂಬಂತಹ ಯೋಚನೆಗಳು ಅವನಿಗೆ. ನೆಮ್ಮದಿ ದಕ್ಕಿದರೆ ದಕ್ಕೀತು. ಅದೆಷ್ಟು ದಿನ. ಅದಕ್ಕೊಂದು ಶಾಶ್ವತ ಪರಿಹಾರಬೇಕಲ್ಲ... ಸುಲಭಕ್ಕೆ ದಕ್ಕುವುದು ಮಾತ್ರ ಸಾವಿನ ದಾರಿ. ಆ ಸಾವಿಗೆ ಸಾವಿರ ದಾರಿಗಳು ಎಂದುಕೊಂಡವನಿಗೆ ನೆನಪಾದದ್ದು 'ಬೇತಾಳಗುಡ್ಡ'. ಒಂದು ರಾತ್ರಿ ಆ ಗುಡ್ಡದ ತಾವು ಹೋಗಿ ಮಲಗಿದರಾಯ್ತು. ಬೆಳಗಾಗುವುದರೊಳಗಾಗಿ ಕರಡಿಯೋ, ಚಿರತೆಯೋ ಅನಾಮತ್ತಾಗಿ ತನ್ನನ್ನು ಬಾಯಿಗೆ ಹಾಕಿಕೊಳ್ಳುತ್ತವೆ. ತಾ ಸತ್ತರೂ ತನ್ನ ಬಗ್ಗೆ ಯೋಚಿಸುವವರಾರು? ಕೇಳಲು ನನಗೆ ಹಿಂದೆ-ಮುಂದೆ ಯಾರೂ ಇಲ್ಲ ಎಂಬ ನಿರಾಶಾದಾಯಕ ವಿಚಾರದೊಂದಿಗೆ ಕೊನೇರಿಗೆ ಹುಂಬ ಧೈರ್ಯ ಬರುತ್ತಿತ್ತು. ಈ ಮೊದಲೂ ಅದೆಷ್ಟೋ ಬಾರಿ ಹೀಗೆ ಯೋಚಿಸಿದ್ದನೋ.. ಈಗ ಅಂತದೇ ವಿಚಾರ ಬಂದೊಡನೆ ತಾನು ಇಂತಹ ಭಯಂಕರ ಯೋಚನೆ ಮಾಡಬಾರದು ಎಂದು ತನ್ನನ್ನು ತಾನೇ ನಿಯಂತ್ರಿಸಿಕೊಂಡ.

ದಿನಗಳೆದಂತೆ ಕೊನೇರಿಗೆ ಆ ಆಗಂತುಕನ ಚಿತ್ರವೇ ಕಾಡತೊಡಗಿತು. ಅವನಂತೆ ತಾನೂ ಆ ಮಹಾನುಭಾವನನ್ನು ಹುಡುಕಿಕೊಂಡು ಹೋಗಬೇಕು, ಅಲ್ಲಿ ತನಗೆ ನೆಮ್ಮದಿಯ ಮಾರ್ಗ ಸಿಕ್ಕೇ ಸಿಗುವುದು ಎಂಬ ನಂಬಿಕೆ ಅವನೊಳಗೆ ಬಲವಾಗತೊಡಗಿತು. ಆತ್ಮಘಾತುಕ ವಿಚಾರಗಳನ್ನು ತುಂಬಿಕೊಂಡಿದ್ದ ಅವನ ನಿಸ್ತೇಜ ಕಣ್ಣುಗಳಲ್ಲೀಗ ಕಾಣುತ್ತಿದ್ದುದು. ನಿಚ್ಚಳ ಹೊಳಪು, ದೃಢ ಸಂಕಲ್ಪ! ಅದಮ್ಯ ತುಡಿತ. ತನಗೆ ಯಾರು ಹೇಳದಿದ್ದರೇನಂತೆ ಆ ಕರಡಿಬೆಟ್ಟಕ್ಕೆ ಹೋಗಿಯೇ ಹೋಗುತ್ತೇನೆ. ಕಾಡು, ಬೆಟ್ಟ, ಗುಡ್ಡ, ಕಣಿವೆ, ಕಾಡು ಪ್ರಾಣಿಗಳು ಎದುರಾದರೂ ವಿಹ್ವಲಗೊಂಡು ನಾನೇನೂ ನನ್ನ ದಾರಿಗೆ ವಿಮುಖನಾಗುವುದಿಲ್ಲ. ಬೆಳಕಿನ ಕೊರಳನ್ನು ಅಪ್ಪಿಕೊಂಡು ವಾಪಸ್ಸು ಬರುತ್ತೇನೆ ಆಗ ಖಂಡಿತವಾಗಿಯೂ ನನ್ನ ಬದುಕಿನಲ್ಲಿ ಕತ್ತಲಿರುವುದಿಲ್ಲ ಎಂಬ ಆತ್ಮವಿಶ್ವಾಸ ತುಂಬಿದ ಈ ಯೋಚನೆಯೇ ಅವನನ್ನು ರೋಮಾಂಚನಗೊಳಿಸಿತು. ಮನಸ್ಸಿಗೆ ಬೇಸರವೆನಿಸಿದಾಗೆಲ್ಲ ತಪ್ಪದೇ ದೂರದ ಆ ಬೆಟ್ಟ ನೆನಪಾಗುತ್ತಿತ್ತು, ಜತೆಗೆ ಆ ಮಹಾನುಭಾವ ಕಂಡಂತೆ, ಅವರೊಡನೆ ಮಾತಾಡಿದಂತೆ. ಆಗುತ್ತಿತ್ತು.

ದಿನಗಳೆದಂತೆ ಕೆಲಸ, ಸಂಬಳ, ಹೆಂಡತಿ ಇಂತಹ ಎಲ್ಲ ವಿಚಾರಗಳು ಕೊನೇರಿಯ ಜೀವ ಹಿಂಡತೊಡಗಿದವು. ಆದರೆ ಆ ಮಹಾನುಭಾವನೊಬ್ಬನೇ ತನಗೆ ಅಂತಿಮ ಪರಿಹಾರವೆಂಬುದನ್ನು ಮನಸ್ಸಿನಲ್ಲಿ ಅಚ್ಚೊತ್ತಿಕೊಂಡ. ಅವರನ್ನು ಸಂಧಿಸುವ ವಿನಃ ತನಗೆ ಬೇರೆ ಉಪಾಯವಿಲ್ಲವೆಂದು ಅವನಿಗೆ ತೀವ್ರವಾಗಿ ಅನಿಸತೊಡಗಿತು.

ಮೊದಲೇ ನಿರ್ಧರಿಸಿದಂತೆ ಸರಿಯಾಗಿ ತಿಂಗಳ ನಂತರ ಆ ಮಹಾನುಭಾವನಿರುವ ಜಾಗವನ್ನು ಹುಡುಕಿಕೊಂಡು ಹೊರಟ ಕೊನೇರಿ. ರಾತ್ರಿ ಗೇಟು ಬಿಟ್ಟವನು ಬೆಳಗ್ಗೆಯಾಗುತ್ತಲೇ ಮೊದಲನೇ ಬೆಟ್ಟವೇರಿ ನಿಂತಿದ್ದ. ಎಲ್ಲಿ ನೋಡಿದರಲ್ಲಿ ಮರಗಳೇ ಮರಗಳು, ಎತ್ತರೆತ್ತರ, ಮುಗಿಲಿಗೆ ಮುತ್ತಿಡಲು ಪೈಪೋಟಿಗಿಳಿದಂತೆ. ಮರಗಳ ಮೈಗೆ ಜೋತು ಬಿದ್ದ ತರಹೇವಾರಿ ಬಳ್ಳಿಗಳು. ಬಾಯ್ದೆರೆದು ನಿಂತ ಕಿಕ್ಕಿರಿದ ಮರಪೊದೆಗಳಿಂದಾದ ಗವ್ವೆನ್ನುವ ಕತ್ತಲ ಗುಹೆ. ಕಿವಿ ಗಡಚಿಕ್ಕುವ ಜೀ... ಎನ್ನುವ ಜೀರುಂಡೆಗಳ ಜೇಂಕಾರವೇ ಅಲ್ಲೆಲ್ಲ. ತಾನು ಎಷ್ಟೊಂದು ಕಾಡು, ಬೆಟ್ಟ ಸುತ್ತಿದ್ದರೂ ಇಂತಹ ಜಾಗವನ್ನೆಂದೂ ಕಂಡಿಲ್ಲವಲ್ಲ. ಇದು ನನ್ನ ಕಲ್ಪನೆಯೋ. ಮಾಯವೋ ಯಾವುದೊಂದು ಗೊತ್ತಾಗುತ್ತಿಲ್ಲ ಎಂದು ಅವಕ್ಕಾಗಿಹೋದ ಕೊನೇರಿ. ಪಕ್ಕದಲ್ಲೆಲ್ಲೋ ಆನೆಗಳ ಘೀಳಿಡುವ ಸದ್ದು ಕೇಳಿಸಿತು!. 'ಬಹುಶಃ ಆ ಗುಂಪಿನಲ್ಲಿ ಹತ್ತೆಂಟು ಆನೆಗಳಾದರೂ ಇರಬಹುದು' ಅಂದಾಜಿಸಿದ ಕೊನೇರಿ ತಾನೂ ಹೀಗೆ ಇಲ್ಲೇ ನಿಂತಿದ್ದರೆ